# "ಐವಿಎಫ್- ಗರ್ಭ ನಿಲ್ಲುವಿಕೆ, ಗರ್ಭಿಣಿಯ ಆರೈಕೆ ಮತ್ತು ಹೆರಿಗೆ"

# ನೈಸರ್ಗಿಕ ಗರ್ಭಧಾರಣೆಯ ಪರ್ಯಾಯ ವಿಧಾನವೇ

# ಐವಿಎಫ್



ನೈಸರ್ಗಿಕ ಗರ್ಭಧಾರಣೆಯ ಪರ್ಯಾಯ ವಿಧಾನವೇ ಇನ್ ವಿಟ್ರೋ ಫರ್ಟಿಲೈಸೇಷನ್ ಅಥವಾ ಐವಿಎಫ್. ಸಮೀಕ್ಷೆಯೊಂದರ ಪ್ರಕಾರ ಜಗತ್ತಿನಲ್ಲಿ 30 ಮಿಲಿಯನ್‌ಗೂ ಹೆಚ್ಚು ದಂಪತಿಗಳು ಐವಿಎಫ್ ಚಿಕಿತ್ಸೆ ಪಡೆಯುತ್ತಿದ್ದಾರೆ. ಇದರಲ್ಲಿ 3 ಮಿಲಿಯನ್ನೂ ಹೆಚ್ಚು ಭಾರತೀಯ ದಂಪತಿಗಳು ಕಳೆದ ಒಂದು ವರ್ಷದಿಂದ ಮಕ್ಕಳಿಲ್ಲದೆ, ಚಿಕಿತ್ಸೆಯೂ ಪಡೆಯಲಾಗದೆ ಸ್ಥಿತಿಯಲ್ಲಿದ್ದಾರೆ, ಕಾರಣ ಕೊವಿಡ್-19 ಸಾಂಕ್ರಾಮಿಕ.

## ಐವಿಎಫ್ ಕುರಿತ ಈ ಐದು ತಪ್ಪು ಕಲ್ಪನೆಗಳು!

ಐವಿಎಫ್ ಸಾಕಷ್ಟು ಜನಪ್ರಿಯವಾಗಿದ್ದರೂ, ಹಲವು ತಪ್ಪು ಕಲ್ಪನೆಗಳಿಂದ ಮಕ್ಕಳನ್ನು ಬಯಸುತ್ತಿರುವ ಬಹಳಷ್ಟು ದಂಪತಿಗಳಿಗೆ ಚಿಕಿತ್ಸೆಯ ಪ್ರಯೋಜನ ಪಡೆಯುವುದು ಸಾಧ್ಯವಾಗುತ್ತಿಲ್ಲ, ಅವುಗಳೆಂದರೆ, 'ಐವಿಎಫ್ ನೋವಿನಿಂದ ಕೂಡಿದ ಮತ್ತು ಸಮಯ ತೆಗೆದುಕೊಳ್ಳುವ ಚಿಕಿತ್ಸೆ', 'ಚಿಕಿತ್ಸೆಯ ನಂತರ ವಿಶ್ರಾಂತಿ ಪಡೆಯಬೇಕು', 'ಚಿಕಿತ್ಸೆಗೆ ವಯೋಮಿತಿಯಿದೆ', 'ಐವಿಎಫ್‌ನಿಂದ ಜವಳಿ ಮಕ್ಕಳಾಗುತ್ತವೆ', 'ಐವಿಎಫ್ ಮಗು ನಮ್ಮ ದೇಹದಿಂದ ಹುಟ್ಟಿದ್ದಲ್ಲ', ಹೀಗೆ

## ಹಾಗಾದರೆ ಐವಿಎಫ್ ಎಂದರೇನು?

ದಂಪತಿಗಳಲ್ಲಿ ನೈಸರ್ಗಿಕವಾಗಿ ಗರ್ಭಧಾರಣೆ ಸಾಧ್ಯವಾಗದಿದ್ದಾಗ ಅಂದರೆ ಅಂಡಾಣು ಮತ್ತು ವೀರ್ಯಾಣುಗಳು ಸೇರಿಸಿ ಭ್ರೂಣವನ್ನು ಸೃಷ್ಟಿಸಲು ಸಾಧ್ಯವಾಗದಿದ್ದಾಗ ಅಂತಹ ದಂಪತಿಗಳ ಅಂಡಾಣು ಮತ್ತು ವೀರ್ಯಾಣುಗಳನ್ನು ಸಂಗ್ರಹಿಸಿ ಲ್ಯಾಬ್ ನಲ್ಲಿ ಸಾಧ್ಯವಾಗಿಸುವ ವಿಧಾನವೇ ಐವಿಎಫ್. ಭ್ರೂಣವನ್ನು ನಂತರ ಗರ್ಭಾಶಯಕ್ಕೆ ಸೇರಿಸಲಾಗುತ್ತದೆ.ಹಾಗಾಗಿ ಐವಿಎಫ್‌ನಿಂದ ಹುಟ್ಟಿದ ಮಗುವು ನಿಮ್ಮದೇ ದೇಹದಿಂದ ಹುಟ್ಟಿರುವುದರಲ್ಲಿ ಅನುಮಾನ ಬೇಡ.

ಇದೊಂದು ಸಾಧಾರಣ ಒಂದು ದಿನದ ನೋವಿಲ್ಲದ ಚಿಕಿತ್ಸಾ ವಿಧಾನ. ಐವಿಎಫ್ ಚಿಕಿತ್ಸೆಯ ನಂತರ ಅತಿ ವಿಶ್ರಾಂತಿಯ ಅಗತ್ಯವಿಲ್ಲ, ಬದಲಾಗಿ ನೀವು ಎಂದಿನಂದ ಗೆಲುವಿನಿಂದ ಕೆಲಸ ಕಾರ್ಯಗಳಲ್ಲಿ ತೊಡಗಿಕೊಳ್ಳಬಹುದು.

ಪ್ರಖ್ಯಾತ ಐವಿಎಫ್ ಮತ್ತು ಸ್ತ್ರೀರೋಗ ತಜ್ಞೆ ಡಾ. ಉಷಾ.ಬಿ.ಆರ್. ಹೇಳುವಂತೆ, ಪ್ರತಿ ಹೆಣ್ಣೂ ಸಹ ತಾನು ಗರ್ಭ ಧರಿಸಿ ತನ್ನದೇ ಮಗುವನ್ನು ಪಡೆಯುವ ಮೂಲಕ ಅದರ ದೈವೀ ಅನುಭವ, ಸುಖವನ್ನು ಪಡೆಯಲು ಅರ್ಹಳು. ಒಂದು ಹೆಣ್ಣಿಗೆ ತಾನು ಗರ್ಭವತಿಯಾಗುವ, ತನ್ನ ಮಗುವನ್ನು ಎದೆಗಪ್ಪಿಕೊಳ್ಳುವ ಬಯಕೆ ಇದ್ದೇ ಇರುತ್ತದೆ. ಹಾಗಾಗಿ ಗರ್ಭಿಣಿಯಾಗಿ ಮಗುವನ್ನು ಹೆತ್ತು ತಾಯಿಯಾಗುವ ಕನಸನ್ನು ಅನುದಿನವೂ ಕಾಣುತ್ತಿರುತ್ತಾಳೆ. ಒಂದು ಹೆಣ್ಣು ತಾಯಿಯಾದಾಗಲೇ ಪರಿಪೂರ್ಣತೆ ಕಾಣಲು ಸಾಧ್ಯವೆಂಬ ನಂಬಿಕೆ ಈಗಲೂ ಇದೆ. ಕುಟುಂಬದಲ್ಲಿ ಮತ್ತು ಸಮಾಜದಲ್ಲಿ ವಿಶೇಷ ಪ್ರೀತಿ ಆದರಗಳನ್ನು ಗಳಿಸಿಕೊಳ್ಳಲು ತಾಯ್ತನವೆಂಬುದು ಅಮೂಲ್ಯವೆನಿಸುತ್ತದೆ.

**ಒಂದು ಹೆಣ್ಣಿಗೆ ತಾಯ್ತನದ ಕೊಡುಗೆಯೇ ಐವಿಎಫ್**

ಪ್ರತಿಯೊಬ್ಬ ಹೆಣ್ಣಿಗೂ ತಾನು ತಾಯಿಯಾಗುವ ಮತ್ತು ತನ್ನ ಮಗುವನ್ನು ಹೆರುವ ಹಕ್ಕಿದೆ. ಅದು ನೈಸರ್ಗಿಕ ಗರ್ಭಧಾರಣೆಯಿಂದಲೂ ಆಗಿರಬಹುದು ಅಥವಾ Assisted Reproduction (ART) ನಿಂದಾದರೂ ಮಗುವನ್ನು ಹೆರುವ ಮತ್ತು ಪ್ರೀತಿಯಿಂದ ಮಡಿಲನ್ನು ತುಂಬಿಕೊಳ್ಳಲು ಸಾಧ್ಯವಿದೆ, ಎನ್ನುತ್ತಾರೆ ಡಾ. ಉಷಾ.

## ಐವಿಎಫ್ ಹೇಗೆ?

ಐವಿಎಫ್ ನಲ್ಲಿ ಅಂಡಾಶಯದ ಉತ್ತೇಜನ, ಅಂಡಾಣುವನ್ನು ಆಯುವುದು ಮತ್ತು ಭ್ರೂಣದ ವರ್ಗಾವಣೆಯೆಂಬ ಮೂರು ಹಂತಗಳಿವೆ. ಐವಿಎಫ್ ಬಯಸುವ ಹೆಂಗಸರಿಗೆ 9 - 11 ದಿನಗಳ ಕಾಲ ಪ್ರತಿದಿನ ಹಾರ್ಮೋನ್ ಇಂಜೆಕ್ಷನ್ ನೀಡಲಾಗುತ್ತದೆ. ಅಂಡಾಣುವಿನ ಬೆಳವಣಿಗೆಯನ್ನು ತಿಳಿಯಲು ಸ್ಕ್ಯಾನಿಂಗ್ ಮತ್ತು ರಕ್ತದ ಪರಿಶೀಲನೆ ನಡೆಸಲಾಗುತ್ತದೆ. ಟ್ರಿಗರ್ ಇಂಜೆಕ್ಷನ್ ( ಅಂಡೋತ್ಪತ್ತಿಗೆ ಪ್ರಚೋದನೆ) ನೀಡಿ ಸರಿಯಾಗಿ 34 - 36 ಗಂಟೆಗಳ ನಂತರ ಅಂಡಾಣುವನ್ನು ಆಯ್ದುಕೊಳ್ಳಲಾಗುತ್ತದೆ (ಎಗ್ ರಿಟ್ರೀವಲ್). ಈ ವಿಧಾನವನ್ನು 10 ರಿಂದ 15 ನಿಮಿಷಗಳಲ್ಲಿ ಅರವಳಿಕೆ ಪ್ರಯೋಗದ ಮೂಲಕ ಐವಿಎಫ್ ಲ್ಯಾಬ್‌ನಲ್ಲಿ ಮಾಡಲಾಗುತ್ತದೆ. ಹೀಗೆ ಆಯ್ದ ಅಂಡಾಣುವನ್ನು ಪರಿಷ್ಕರಿಸಿದ ವೀರ್ಯಾಣುಗಳೊಂದಿಗೆ ಸೇರಿಸಿ ಭ್ರೂಣವನ್ನು ಬೆಳೆಸಲಾಗುತ್ತದೆ. ಭ್ರೂಣ 3 ಅಥವಾ 5 ದಿನಗಳವರೆಗೆ ಬೆಳೆದ ನಂತರ ಗರ್ಭಾಶಯಕ್ಕೆ ಸೇರಿಸಲಾಗುತ್ತದೆ.

ಐವಿಎಫ್ ಯಶಸ್ಸಿಗೆ ಕಡಿವಾಣವೆಂದರೆ ಅದು ದಂಪತಿಗಳ ಮೀರಿದ ವಯಸ್ಸು! 30 ವರುಷದಲ್ಲಿ ಸಾಧ್ಯತೆ ಹೆಚ್ಚಿದ್ದರೆ, 35 ವರುಷದವರಿಗೆ ಕಡಿಮೆ ಸಾಧ್ಯತೆ ಮತ್ತು 40 ಮೀರಿದವರಿಗೆ ಸಾಧ್ಯತೆ ಅತಿ ಕಡಿಮೆ ಇರುತ್ತದೆ. ಐವಿಎಫ್ ಪಡೆಯುವ ದಂಪತಿಗಳು 20 - 30 ರ ವಯಸ್ಸಿನಲ್ಲಿದ್ದರೆ ಚಿಕಿತ್ಸೆಯ ಫಲಿತಾಂಶ ಯಶಸ್ವಿಯಾಗುವ ಸಾಧ್ಯತೆ ಬಹಳ ಹೆಚ್ಚು.

ಕೋವಿಡ್ -19 ಸಂದರ್ಭದಲ್ಲಿ ಅನುಮತಿ ಪಡೆದ ಐವಿಎಫ್ ಲ್ಯಾಬ್‌ಗಳಲ್ಲಿ ಶಿಸ್ತು ಮತ್ತು ನಿಯಮಗಳ ಪ್ರಕಾರ ಚಿಕಿತ್ಸೆ ನಡೆಸಲಾಗುತ್ತದೆ. ಆದ್ದರಿಂದ ಐವಿಎಫ್ ಬಯಸುವ ದಂಪತಿಗಳು ಚಿಕಿತ್ಸೆ ಮುಂದೂಡುವುದರಲ್ಲಿ ಅರ್ಥವಿಲ್ಲ, ಎನ್ನುತ್ತಾರೆ ಡಾ.ಉಷಾ.ಬಿ.ಆರ್.

***ದೇವರು ಎಲ್ಲೆಡೆ ಇರಲು ಸಾಧ್ಯವಿಲ್ಲ, ಆದ್ದರಿಂದ ಹೆಣ್ಣನ್ನು ಸೃಷ್ಟಿಸಿದ ಎಲ್ಲರೂ ತಾಯಂದಿರಾಗಲು ಸಾಧ್ಯವಾಗಲೆಂದು ಐವಿಎಫ್ ಕರುಣಿಸಿದ ಮಕ್ಕಳಿಲ್ಲದೆ ನೊಂದ ದಂಪತಿಗೊಂದು ವರದಾನ ಐವಿಎಫ್ !***

(ಓದುಗರೇ, ಪ್ರಖ್ಯಾತ ಸ್ತ್ರೀರೋಗ, ಐವಿಎಫ್ ತಜ್ಞೆ ಡಾ. ಉಷಾ.ಬಿ.ಆರ್ ಅವರು ನಡೆಸಿಕೊಡುವ 'ಸುಪ್ರಭಾತ ವಾಹಿನಿಯ ಜನಪ್ರಿಯ' ಕೇಳೀ ಗೆಳತಿ ಕಾರ್ಯಕ್ರಮ, ಪ್ರತಿ ಹೆಣ್ಣಿನ ಕನಸುಗಳಿಗೆ ನೈಜತೆಯ ಪರಿಹಾರ ನೀಡಿ ಸಂತೈಸುತ್ತದೆ. ತಮ್ಮ ಯಾವುದೇ ಈ ರೀತಿಯ ಆರೋಗ್ಯ ಸಮಸ್ಯೆಗಳಿಗೆ ತಜ್ಞ ವೈದ್ಯರಿಂದ ಪರಿಹಾರ ಕಂಡುಕೊಳ್ಳಿ, ತಡಮಾಡದಿರಿ, ಹೆಚ್ಚಿನ ಮಾಹಿತಿಗೆ ಕರೆಮಾಡಿ)




**ಉಷಾ ಸ್ಪೆಷಾಲಿಟಿ ಕ್ಲಿನಿಕ್**

No.26, 1st Cross, 7th Main, KSRTC Layout, 2nd Phase, J P Nagar,
Bangalore - 560 078, Mob: 88845 22455